## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/870/2019/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು
ದಿನಾಂಕ: 30.11.2020.

### ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಮಲ್ಲಪ್ಪ ಬಾನುವಳ್ಳಿ, ಅಬಕಾರಿ ನಿರೀಕ್ಷಕರು, ಸಿಂದಗಿ ವಲಯ, ಸಿಂದಗಿ ಟೌನ್, ವಿಜಯಪುರ ಜಿಲ್ಲೆ, ಹಾಲಿ ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರು ಕಛೇರಿ, ಕೊಠಡಿ ಸಂಖ್ಯೆ: 64 ಮತ್ತು 65 ಬಿ.ಡಿ.ಎ ಕಾಂಪ್ಲೆಕ್ಸ್, ಆರ್.ಟಿ.ಓ ಕಛೇರಿ ಮಲ್ಲೇಶ್ವರಂ ವಲಯ, ಬೆಂಗಳೂರು ನಗರ ಜಿಲ್ಲೆ (ಉತ್ತರ) ಇವರು ಸರ್ಕಾರಿ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1) ದೂರುದಾರರಾದ ಶ್ರೀ ರಾಮಮೂರ್ತಿ ಗೌಡ, ಪತ್ರಕರ್ತರು, ಆರ್.ಟಿ.ಐ., ಕಾರ್ಯಕರ್ತರು, ನಂ. 2, 8ನೇ ಕ್ರಾಸ್, ಓಬಳಪ್ಪ ಬಡಾವಣೆ, ಪಾಪರೆಡ್ಡಿ ಪಾಳ್ಯ, ನಾಗರಬಾವಿ, 2ನೇ ಹಂತ, ಬೆಂಗಳೂರು (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಮಲ್ಲಪ್ಪ ಬಾನುವಳ್ಳಿ, ಅಬಕಾರಿ ನಿರೀಕ್ಷಕರು, ಸಿಂದಗಿ ವಲಯ, ಸಿಂದಗಿ ಟೌನ್, ವಿಜಯಪುರ ಜಿಲ್ಲೆ, **ಹಾಲಿ** ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರು ಕಛೇರಿ, ಕೊಠಡಿ ಸಂಖ್ಯೆ: 64 ಮತ್ತು 65 ಬಿ.ಡಿ.ಎ ಕಾಂಪ್ಲೆಕ್ಸ್, ಆರ್.ಟಿ.ಓ ಕಛೇರಿ ಮಲ್ಲೇಶ್ವರಂ ವಲಯ, ಬೆಂಗಳೂರು ನಗರ ಜಿಲ್ಲೆ (ಉತ್ತರ) (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2) ದೂರಿನ ಸಂಕ್ಷಿಪ್ತ ಸಾರಾಂಶ:

ಎದುರುದಾರರು ತಮ್ಮ ಅಧಿಕಾರ ಚಲಾಯಿಸಿ 01/07/2017 ರಿಂದ 01/07/2018 ರವರೆವಿಗೂ ತಮ್ಮ ವ್ಯಾಪ್ತಿಯ ಸನ್ನದುಗಳು ದಂಡ ಮೊಕದ್ದಮೆ ದಾಖಲಾಗಿದ್ದ ಸನ್ನದುಗಳು ಮತ್ತು ದಂಡ ಪಾವತಿಸಿದ ಸನ್ನದುಗಳನ್ನು 2018-19ನೇ ಸಾಲಿಗೆ ನವೀಕರಣ ಮಾಡಲು ಅಕ್ರಮವಾಗಿ ತಮ್ಮ ಮೇಲ್ಪಟ್ಟ ಹಿರಿಯ ಅಧಿಕಾರಿಗೆ ಶಿಫಾರಸ್ಸು ಮಾಡಿರುತ್ತಾರೆ. ಈ ರೀತಿ ಅಕ್ರಮ ಮುಚ್ಚಿ ಶಿಫಾರಸ್ಸು ಮಾಡಲು ಸಿಎಲ್-2, ಸಿಎಲ್-9 ಸನ್ನದುಗಳ ಮಾಲೀಕರಿಂದ ಎದುರುದಾರರು ಲಂಚದ ಹಣವನ್ನು ಪಡೆದಿರುತ್ತಾರೆ. ಎದುರುದಾರರು ಈ ರೀತಿ ಭ್ರಷ್ಟಾಚಾರ ನಡೆಸಿ ಲಂಚ ಸ್ವೀಕರಿಸಿರುತ್ತಾರೆ. ಹಿಂದಿನ ವರ್ಷ ದಂಡದ ಸನ್ನದುಗಳು ಮುಂದಿನ ವರ್ಷಕ್ಕೆ ಅಕ್ರಮವಾಗಿ ನವೀಕರಣಗೊಂಡಿರುತ್ತದೆ. ದಂಡದ ಸನ್ನದುಗಳನ್ನು 2018-19ನೇ ಸಾಲಿಗೆ ನವೀಕರಣ ಮಾಡಲು ಎದುರುದಾರರು ಮೇಲ್ಪಟ್ಟ ಹಿರಿಯ ಅಧಿಕಾರಿಗೆ ಶಿಫಾರಸ್ಸು ಮಾಡಿದ್ದಾರೆ ಎಂದು ಆರೋಪಿಸಿ ದೂರು ಸಲ್ಲಿಸಿರುತ್ತಾರೆ.

3) ದೂರು ಮತ್ತು ಲಗತ್ತು ದಾಖಲೆಗಳಾದ ಸುತ್ತೋಲೆ ಪ್ರತಿಗಳನ್ನು ಪರಿಶೀಲಿಸಲಾಗಿ ಎದುರುದಾರರು ದಂಡ ಪಾವತಿಸಿದ ಸನ್ನದನ್ನು ನವೀಕರಿಸಲು ಶಿಫಾರಸ್ಸು ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

4) ಎದುರುದಾರನ ಆಕ್ಷೇಪಣೆ:- ಸದರಿ ಪ್ರಕರಣದಲ್ಲಿ ದಿ: 18/04/2019 ರಂದು ಎದರುದಾರನು ಆಕ್ಷೆಪಣೆಯನ್ನು ಸಲ್ಲಿಸಿದ್ದು, ಪರಿಶೀಲಿಸಲಾಗಿ ತಾನು ದಿ: 05/04/2018 ರಿಂದ 22/11/2018 ರ ವರೆಗೆ ಸಿಂಧಗಿ

ವಲಯ, ವಿಜಯಪುರ ಜಿಲ್ಲೆಯಲ್ಲಿ ಅಬಕಾರಿ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿರುವುದಾಗಿ ತನ್ನ ಕಾರ್ಯಾವಧಿಯ 2017-18 ನೇ ಸಾಲಿನಲ್ಲಿ ಸಿಂಧಗಿ ವಲಯದಲ್ಲಿ 14 ಸಿ.ಎಲ್-2 ಸನ್ನದ್ದು ಮಳಿಗೆಗಳು ಹಾಗೂ 4 ಸಿ.ಎಸ್-9 ಸನ್ನದ್ದು ಮಳಿಗಿಗಳು ಕಾರ್ಯನಿರ್ವಹಿಸುತ್ತದು ತಾನು ಸದರಿ ಮಳಿಗೆಗಳಿಗೆ ಸಿಬ್ಬಂದಿಯೊಂದಿಗೆ ಅಬಕಾರಿ ಉಪ ಆಯುಕ್ತರ ಕಛೇರಿಯ ತಂಡದೊಂದಿಗೆ ಭೇಟಿ ನೀಡಿದ ಸಮಯದಲ್ಲಿ ಕಂಡುಬಂದ ಷರತ್ತು ಉಲ್ಲಂಘನೆಗೆ ಕರ್ನಾಟಕ ಅಭಕಾರಿ ಕಾಯ್ದೆ 1965 ರ ಕಲಂ 36 ರಂತೆ ಮೊಕದ್ದಮೆಗಳನ್ನು ದಾಖಲಿಸಿರುತ್ತೇನೆ. ಸನ್ನದುದಾರರು ಸನ್ನದ್ದು ಷರತ್ತುಗಳ ಉಲ್ಲಂಘನೆಗಾಗಿ ದಾಖಲಿಸಲ್ಪಟ್ಟ ಪ್ರಕರಣಗಳ ಪೈಕಿ(ಸಿ) (ಜಿ) ಮತ್ತು (ಹೆಚ್) ರ ಕಲಂ 36 ರನ್ವಯ ಎಸಗಿದ ಉಲ್ಲಂಘನೆ ಹೊರತುಪಡಿಸಿ ಉಳಿದ ಎಲ್ಲಾ ಉಲ್ಲಂಘನೆಗಳನ್ನು ಕಲಂ 45 ರಡಿ ದಂಡವಿಧಿಸಿ ಇಲಾಖೆ ಮೂಲಕ ಇತ್ಯಾರ್ಥ ಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಕಲಂ 45 ರಡಿ ಅಭಕಾರಿ ಆಯುಕ್ತರು, ಜಿಲ್ಲಾಧಿಕಾರಿಗಳು, ಅಬಕಾರಿ ಉಪ ಅಯುಕ್ತರುಗಳು ದಾಖಲಿಸಿದ ಮೊಕದ್ದಮೆಗಳನ್ನು ಇಲಾಖೆ ವತಿಯಿಂದ ಕನಿಷ್ಟ 5 ಸಾವಿರ ದಿಂದ ಗರಿಷ್ಟ 50 ಸಾವಿರದ ವರೆಗೆ ದಂಡ ವಿಧಿಸಿ ಇತ್ಯಾರ್ಥ ಪಡಿಸಲು ಅವಕಾಶ ಕಲ್ಪಸಿದ್ದು, ದಾಖಲಿಸಿದ ಪ್ರಕರಣಗಳನ್ನು ಸನ್ನದುದಾರರು ಸಲ್ಲಸಿದ ಮನವಿಮೇರೆಗೆ ಸರ್ಕಾರದ ಆರ್ಥಿಕ ಹಿತ ದೃಷ್ಟಿಯಿಂದ ಅಬಕಾರಿ ಉಪ ಆಯುಕ್ತರು ತಮಗೆ ಪ್ರದಾತ್ತವಾದ ಅಧಿಕರದಂತೆ ರೂ. 5 ಸಾವಿರ ದಿಂದ ಗರಿಷ್ಟ 50 ಸಾವಿರದ ವರೆಗೆ ದಂಡ ವಿಧಿಸಿ ಇತ್ಯಾರ್ಥ ಪಡಿಸಲಾಗಿದೆ. ಇದರಿಂದ ಸನ್ನದುದಾರರಿಂದ ದಂಡದ ಹಣ ವಸೂಲಿಯಾದ ಸಂಬಂದ ಪ್ರಕರಣವನ್ನು ಮುಕ್ತಾಯ ಮಾಡಲಾಗಿದೆ ಎಂದು ನಮೂದಿಸಲಾಗಿರುತ್ತದೆ. 2017-18 ನೇ ಸಾಲಿನಲ್ಲಿ ಸಿಂಧಗಿ

ವಲಯದ ಸನ್ನದುದಾರರು ಷರತ್ತುಗಳ ಉಲ್ಲಂಘನೆಗಾಗಿ 38 ಪ್ರಕರಣಗಳು ದಾಖಲಾಗಿದ್ದು, ತಾನು ಕರ್ತವ್ಯ ನಿರ್ವಹಿಸಿದ ಸಮಯದಲ್ಲಿ 8 ಬಿ.ಎಲ್.ಸಿ ಪ್ರಕರಣಗಳು ದಾಖಲಗಿರುತ್ತವೆ. 2018-19ನೇ ಸಾಲಿನಲ್ಲಿ ಸನ್ನದು ನವೀಕರಣಕ್ಕೆ ಪ್ರಸ್ತಾವನೆ ಸಲ್ಲಿಸುವ ಸಮಯಕ್ಕೆ ಸಿ.ಎಲ್-2 ಸಿ.ಎಲ್-9 ಸನ್ನದುಗಳ ವಿರುದ್ಧ ಒಟ್ಟು 38 ಮೊಕದ್ದಮೆಗಳನ್ನು ಕಲಂ 45 ರಂತೆ ಸನ್ನದುದಾರರ ಕೋರಿಕೆ ಮೇರೆಗೆ ಅಬಕಾರಿ ಉಪ ಆಯುಕ್ತರು ದಂಡ ವಿಧಿಸಿ ಇತ್ಯಾರ್ಥ ಪಡಿಸಿರುತ್ತಾರೆ. ತನ್ನ ಅವಧಿಯಲ್ಲಿ 8 ಬಿ.ಎಲ್.ಸಿ ಪ್ರಕರಣಗಳಲ್ಲಿ ಗರಿಷ್ಟ ಮಾರಾಟ ಬೆಲೆಗಿಂತ ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡಿದ ಸಂಬಂಧ 5 ಪ್ರಕರಣಗಳು ಸಿ.ಎಲ್.-9 ಸನ್ನದ್ದಿನ ಮಳಿಗೆಯಲ್ಲಿ ಮದ್ಯದ ಜೊತೆ ಊಟವನ್ನು ಸರಬರಾಜು ಮಾಡುವುದು ಕರ್ತವ್ಯವಾಗಿದ್ದು, ಆದರೆ ಸದರಿ ಮಳಿಗೆಗಳಿಗೆ ಬರುವ ಗ್ರಾಹಕರು ಹಿಂದುಳಿದ ಜನರಾಗಿದ್ದು, ಮದ್ಯವ್ಯಸನಿಗಳಾಗಿದ್ದು, ಪಾನೀಯದ ಜೊತೆ ಸಸ್ಯಹಾರ ಮತ್ತು ಮಾಂಸಹಾರ ಹಾಗೂ ಡ್ರೈ ಐಟಂ ಕೊಳ್ಳಲು ಸಶಕ್ತರಾಗಿರದ ಕಾರಣ ಕೇವಲ ಮದ್ಯ ಸೇವನೆ ಮಾಡಲು ಅವಕಾಶ ನೀಡಿದ ಎರಡೂ ಪ್ರಕರಣ ಹಾಗೂ ಮದ್ಯ ಮಾರಾಟವಾದ ಕುರಿತು ರಸೀದಿಯನ್ನು ನೀಡದೇ ಇರುವ ಕಾರಣ ಎರಡು ಪ್ರಕರಣ ದಾಖಲಾಗಿರುತ್ತವೆ. ಸದರಿ 8 ಪ್ರಕರಣಗಳನ್ನು ಇಲಾಖೆಯ ಮುಖಾಂತರ ಇತ್ಯಾರ್ಥ ಪಡಿಸಿ 1 ಲಕ್ಷ 92 ಸಾವಿರ ರೂಗಳನ್ನು ಸಂಗ್ರಹಣೆ ಮಾಡಲಾಗಿರುತ್ತದೆ. ತನ್ನ ಕರ್ತವ್ಯದ ಸಮಯದಲ್ಲಿ ಸಿಂಧಗಿ ತಾಲೂಕಿನ ಹಿಮಾಲಯ ವೈನ್ಸ್ ಸಿ.ಎಲ್-2 ಇವರು ಹೆಚ್ಚಿನ ಬೆಲೆಗೆ ಮದ್ಯ ಮಾರಾಟ ಮಾಡಿದ ಸಂಬಂಧ ಸದರಿಯವರ ಸನ್ನದ್ದನ್ನು ಜಿಲ್ಲಾಧಿಕಾರಿಗಳು, ವಿಜಯಪುರ ಅಮಾನತ್ತು ಮಾಡಿದ್ದರು. 2017-18

ನೇ ಸಾಲಿನ ಅಬಕಾರಿ ವರ್ಷದಲ್ಲಿ ಸಿಂಧಗಿ ವಲಯದಲ್ಲಿ ಒಟ್ಟು 5 ಲಕ್ಷ 2 ಸಾವಿರ ರೂಗಳು ದಂಡ ಹಣ ವಸೂಲಾಗಿರುತ್ತವೆ. ತಾನು ಅಬಕಾರಿ ಕಾಯ್ದೆಗಳನ್ನು ಹಾಗೂ ನಿಯಮಗಳನ್ನು ಚಾಚು ತಪ್ಪದೇ ಪಾಲಿಸಿರುವುದರಿಂದ ದೂರುದಾರರು ನೀಡಿರುವ ದೂರನ್ನು ಮುಕ್ತಾಯಗೊಳಿಸಲು ಕೋರಿ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ. ಆಕ್ಷೇಪಣೆಯೊಂದಿಗೆ ತಮ್ಮ ಸೇವಾ ವಿವರ, ದಂಡ ವಿಧಿಸಿದ ಪ್ರಕರಣಗಳ ಪಟ್ಟಿ ಲಗತ್ತಿಸಿರುತ್ತಾರೆ. ದಂಡ ವಿಧಿಸಲ್ಪಟ್ಟ ಸನ್ನದುದಾರರ ಪಟ್ಟಿಯನ್ನು ಪರಿಶೀಲಿಸಲಾಗಿ ಸಿ.ಎಲ್-2 ಸನ್ನದುದಾರರಾದ ಎಸ್.ಟಿ. ಸುಣಗಾರ್ ಇವರ ವಿರುದ್ಧ 10 ಪ್ರಕರಣಗಳನ್ನು 2017-18 ನೇ ಸಾಲಿನಲ್ಲಿ ದಾಖಲಿಸಿರುವುದು ಕಂಡು ಬರುತ್ತದೆ. ಸಿ.ಎಲ್-2 ಸನ್ನದುದಾರರನಾದ ಆರ್.ಎಸ್. ಕಲಕೇರಿ ಇವರ ವಿರುದ್ಧ 3 ಪ್ರಕರಣಗಳನ್ನು ಹಾಗೂ ಡಿ.ಎಸ್. ಗುತ್ತೆದಾರ, ಆರ್.ಬಿ ಗುತ್ತೆದಾರ, ಎಸ್.ಟಿ ಗುತ್ತೆದಾರ, ಎ.ಬಿ ಗುತ್ತೆದಾರ, ಡಿ.ವೈ ಗುತ್ತೆದಾರ, ವಿ.ಆರ್ ಗುತ್ತೆದಾರ, ಇವರ ಮೇಲೆ ಉಳಿದ ಪ್ರಕರಣಗಳನ್ನು ದಾಖಲಿಸಿರುವುದು ಕಂಡುಬರುತ್ತದೆ. ಇದರಿಂದ ಸನ್ನದುದಾರರು ಕಾನೂನನ್ನು ಮತ್ತು ನಿಯಮಗಳನ್ನು ಪಾಲಿಸದೇ ಪದೇ ಪದೇ ನಿರ್ಲಕ್ಷ್ಯಿಸುತ್ತಿರುವುದು ಕಂಡುಬರುತ್ತದೆ.

5) ಮಾನ್ಯ ಉಪಲೋಕಾಯುಕ್ತರು-2 ರವರ ಕಂಪ್ಲೇಂಟ್/ಉಪಲೋಕ್/ಬಿಡಿ/8428/2015/ಡಿಆರ್‌ಇ-1 ರಲ್ಲಿ ನೀಡಿದ ಆದೇಶ ದಿ: 23/01/2018 ರಂದು ನೀಡಲಾದ ಸಲಹೆ ಸೂಚನೆಗಳನ್ನು ಮತ್ತು ಪದೇ ಪದೇ ಷರತ್ತುಗಳನ್ನು ಉಲ್ಲಂಗಿಸಿದುರ ವಿರುದ್ಧ ಸನ್ನದುಗಳನ್ನು ನವೀಕರಿಸಲು ನೀಡಿದ ಸೂಚನೆಗಳನ್ವಯ

ಪಾಲಿಸಧೇ ಹೋಗಿರುವುದು ಹಾಗೂ ಅಬಕಾರಿ ಕಾಯ್ದೆ ಕಲಂ 29 ರನ್ವಯ ಲೈಸೆನ್ಸ್ ನಿಭಂದನೆಗಳನ್ನು ಮತ್ತು ಷರತ್ತುಗಳನ್ನು ಉಲ್ಲಂಘಿಸಿ ವ್ಯವಹಾರ ಮಾಡಿರುವ ಯಾವ ಸನ್ನದುದಾರನ ವಿರುದ್ಧ ಮೊಕದ್ದಮೆಗಳು ದಾಖಲಾಗಿವೆಯೊ ಮತ್ತು ಯಾವ ಸನ್ನದುದಾರನು ದಂಡ ವನ್ನು ಪಾವತಿಸಿರುತ್ತಾರೋ ಅಂತಹ ಸನ್ನದುದಾರರ ಸನ್ನದನ್ನು ನವೀಕರಿಸದಂತೆ ಸೂಕ್ತ ಕ್ರಮ ವಹಿಸುವಂತೆ ನಿರ್ದೇಶನ ನೀಡಿದ್ದನ್ನು ಎದುರುದಾರರು ಪಾಲಿಸದೇ ಹೋಗಿರುವುದು ಕಂಡು ಬರುತ್ತದೆ. ಈ ಕುರಿತು ದಿ: 05/03/2018 ರಂದು ಸರ್ಕಾರವು ಸುತ್ತೊಲೆಯನ್ನು ಸಹಾ ಹೊರಡಿಸಿರುತ್ತದೆ. ಆದಾಗ್ಯೂ ಎದರುದಾರನು ಸದರಿ ಸನ್ನದುದಾರರು ಪದೇ ಪದೇ ಷರತ್ತುಗಳನ್ನು ಉಲ್ಲಂಘಿಸಿದ್ದರು ಸಂಬಂಧ ಪ್ರಕರಣ ದಾಖಲಾಗಿ ದಂಡ ಪಾವತಿಸಿದ್ದರೂ ಸಹಾ ಇವುಗಳನ್ನು ಪರಿಗಣಿಸದೇ ಎದುರುದಾರನು ಸನ್ನದ್ದನ್ನು ನವೀಕರಿಸಲು ಸಿಫಾರಸ್ಸು ಮಾಡಿರುವುದನ್ನು ಗಮನಿಸಿದ್ದಲ್ಲಿ ದೂರುದಾರರು ಅಪಾದಿಸಿರುವಂತೆ ಸನ್ನದುದಾರರಿಗೆ ಸಹಕರಿಸಲು ಕರ್ತವ್ಯದಲ್ಲಿ ಲೋಪವೆಸಗಿರುವುದು ಮತ್ತು ಸರ್ಕಾರದ ಸುತ್ತೊಲೆಯನ್ನು ಪರಿಗಣಿಸದೇ ಮತ್ತು ಸೂಕ್ತ ಕ್ರಮ ಜರುಗಿಸದೇ ಸನ್ನದುದಾರರಿಗೆ ಸಹಾಯ ಮಾಡಿರುವುದು ಕಂಡು ಬರುತ್ತದೆ. ಸನ್ನದುದಾರರ ಸನ್ನದನ್ನು ನವೀಕರಿಸುವ ಅರ್ಜಿಯ ಸಿಫಾರಸ್ಸನ್ನು ಮಾಡುವ ಸಂದರ್ಭದಲ್ಲಿ ಈ ಅಂಶಗಳನ್ನು ನಮೂದಿಸದೇ ನವೀಕರಿಸಲು ಮೇಲ್ ಅಧಿಕಾರಿಗಳಿಗೆ ಸಲ್ಲಿಸಿರುವುದು ಎದುರುದಾರನ ನಿರ್ಲಕ್ಷ್ಯವಾಗಿರುತ್ತದೆ. ಈ ಮೇಲ್ಕಾಣಿಸಿದ ಅಂಶಗಳಿಂದ ಎದುರುದಾರನು ಸಲ್ಲಿಸಿರುವ ಆಕ್ಷೇಪಣೆಯನ್ನು ಒಪ್ಪಲು ಬರುವುದಿಲ್ಲ. ಆದ್ದರಿಂದ ಎದುರುದಾರನು ತನ್ನ ಕರ್ತವ್ಯದಲ್ಲಿ ನಿರ್ಲಕ್ಷ್ಯ

ತೋರಿರುವುದರಿಂದ ಮತ್ತು ಸದರಿ ಸನ್ನದುದಾರರು ದಂಡ ಪಾವತಿಸಿದ ಅಂಶಗಳನ್ನು ನವೀಕರಿಸುವ ಸಮಯದಲ್ಲಿ ಅರ್ಜಿಯ ಷರಾ ಭಾಗದಲ್ಲಿ ಎಷ್ಟುಸಾರಿ ದಂಡ ವಿಧಿಸಲಾಗಿದೆ ಹಾಗೂ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂಬುದನ್ನು ನಮೂದಿಸದೇ ದಂಡ ವಿಧಿಸಿ ಪ್ರಕರಣ ಇತ್ಯಾರ್ಥಗೊಳಿಸಿದೆ ಎಂಬಂತೆ ಸಲ್ಲಿಸಿರುವುದರಿಂದ ಸನ್ನದುದಾರರ ಸನ್ನದನ್ನು ಮೇಲ್ ಅಧಿಕಾರಿಗಳು ನವೀಕರಿಸಿರಬಹುದಾಗಿರುತ್ತದೆ. ಆದ್ದರಿಂದ ಎದುರುದಾರನು ತನ್ನ ಕರ್ತವ್ಯದಲ್ಲಿ ಲೋಪವೆಸಗಿರುವುದು ಸಾಬೀತಾಗುತ್ತದೆ. ಎದುರುದಾರ ಸಲ್ಲಿಸಿರುವ ಆಕ್ಷೇಪಣೆಯನ್ನು ಒಪ್ಪಲಾಗುವುದಿಲ್ಲ.

6) ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಎದುರುದಾರರಾದ ಶ್ರೀ ಮಲ್ಲಪ್ಪ ಬಾನುವಳ್ಳಿ, ಅಬಕಾರಿ ನಿರೀಕ್ಷಕರು, ಸಿಂದಗಿ ವಲಯ, ಸಿಂದಗಿ ಟೌನ್, ವಿಜಯಪುರ ಜಿಲ್ಲೆ, ಹಾಲಿ ಅಬಕಾರಿ ನಿರೀಕ್ಷಕರು, ಅಬಕಾರಿ ನಿರೀಕ್ಷಕರು ಕಛೇರಿ, ಕೊಠಡಿ ಸಂಖ್ಯೆ: 64 ಮತ್ತು 65 ಬಿ.ಡಿ.ಎ ಕಾಂಪ್ಲೆಕ್ಸ್, ಆರ್.ಟಿ.ಓ ಕಛೇರಿ ಮಲ್ಲೇಶ್ವರಂ ವಲಯ, ಬೆಂಗಳೂರು ನಗರ ಜಿಲ್ಲೆ (ಉತ್ತರ) ಸರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ

ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

N. Anand 30/11

[ನ್ಯಾಯಮೂರ್ತಿ ಎನ್. ಆನಂದ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.